ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಇದೆ,

ಆ) ಶೀಘ್ರದಲ್ಲಿಯೇ ರಚಿಸಲಾಗುವುದು.

ಶ್ರೀ ಎಸ್. ಜಿ. ನಂಜಯ್ಯನಮಠ್.—ಮಾನ್ಯ ಅಧ್ಯಕ್ಷರೆ, ಈ ವಿಷಯಂವಾಗಿ ಇದೇ ಸದನದಲ್ಲಿ ಎರಡೂವರೆ ವರ್ಷಗಳಲ್ಲಿ ನಾನಂ ಐದಂ ಸಾರಿ ಪ್ರಸ್ತಾಪ ಮಾಡಿದ್ದೇನೆ.

ಅಧ್ಯಕ್ಷರು.—ತಾವು ಸಪ್ಲಿಮೆಂಟರಿ ಕೇಳಿ.

ಶ್ರೀ ಎಸ್. ಜಿ. ನಂಜಯ್ಯನಮಠ್.—ಐದು ಸಾರಿಯೂ 'ಶೀಘ್ರದಲ್ಲೇ ರಚಿಸಲಾಗುವುದು' ಎಂದು ಹೇಳಿದ್ದಾರೆ. ಇನ್ನೂ ಮೇಲಾದರೂ ಇದಕ್ಕೆ ತೆರೆ ಎಳೆದಂ ಇದೇ ಆರ್ಥಿಕವರ್ಷದಲ್ಲಿ ರಚಿಸುತ್ತೀರಾ ? ಶೀಘ್ರ ಎಂದರೆ ಎಷ್ಟು ತಿಂಗಳು ? ಐದು ಸಾರಿಯೂ ಶೀಘ್ರದಲ್ಲೇ ಎಂಬ ಉತ್ತರ ಬಂತಂ. ನೇಕಾರರು ಬೀದಿಗಿಳಿದ ಪ್ರಸಂಗ ಬಂದಿರಂವುದಕ್ಕೆ ಪ್ರತ್ಯೇಕ ನಿರ್ದೇಶನಾಲಯ ಇಲ್ಲದಿರಂವುದೂ ಒಂದಂ ಕಾರಣ. ನೇಕಾರರಿಗೆ ಒಂದು ಮಗ್ಗಕ್ಕೆ ಒಂದು ವಾರಕ್ಕೆ ಎಷ್ಟು ನೂಲು ಬೇಕು ಒಂದು ತಿಂಗಳಿಗೆ ಎಷ್ಟು ನೂಲುಬೇಕಂ ಎಂಬ ಬಗ್ಗೆ ಸರ್ಕಾರಕ್ಕೆ ಮಾಹಿತಿ ಪಡೆಯುವುದು ಪ್ರತ್ಯೇಕವಾದ ನಿರ್ದೇಶನಾಲಯ ಮಾಡಿದ್ದರೆ ಸಾಧ್ಯವಾಗುತಿತ್ತು. ಇಂಥ ಜ್ವಲಂತ ಸಮಸ್ಯೆ ಬಗ್ಗೆ ಮಾತನಾಡಿದ್ದೇವೆ.

ಅಧ್ಯಕ್ಷರು.—ತಾವು ಪ್ರಶ್ನೆ ಕೇಳಿ. ಈಗ ಡಿಸ್ಕಷನ್ ಬೇಡ.

ಶ್ರೀ ಎಸ್. ಜಿ. ನಂಜಯ್ಯನಮಠ್.—ನಿರ್ದೇಶನಾಲಯ ಮಾಡಬೇಕೆಂಬ ಉದ್ದೇಶವಿದ್ದರೆ ನಿರ್ದಿಷ್ಟವಾಗಿ ಹೇಳಿ.

ಶ್ರೀ ಬಿ. ಎ. ಜೀವಿಜಯ.—ಅಧ್ಯಕ್ಷರೇ, ಈ ಪ್ರಸ್ತಾಪನೆ ರಿಕಮೆಂಡೇಷನ್ ಮಟ್ಟದಲ್ಲಿಯೇ ಇದೆ. ಕೆಲವು ಸಾಧಕಬಾಧಕಗಳನ್ನು ಸರ್ಕಾರ ಗಮನಿಸಿ ಇದನ್ನು ಮಾಡಬೇಕಾಗಿದೆ. ಏಪ್ರಿಲ್ ತಿಂಗಳ ಆಖೈರು ನೊಳಗೆ ಇದನ್ನು ರಚಿಸಲಾಗುವುದು.

ಶ್ರೀ ಎಸ್. ಜಿ. ನಂಜಯ್ಯನಮಠ್.—ಇದಂ ವಚನವೇ? ಏಪ್ರಿಲ್‌ನಲ್ಲಿ ಮಾಡಂತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಸದನದಲ್ಲಿ ಭರವಸೆ ಕೊಟ್ಟಿದ್ದೇನೆ. ಅದನ್ನು ನಡೆಸಿಕೊಡುತ್ತೇನೆ.

ನಿರುದ್ಯೋಗಿಗಳಿಗೆ ಸಾಲ ಕೊಡಂವ ಬಗ್ಗೆ.

೧೮೨೨. ಶ್ರೀ ವೇದಾಂತ ಹೆವಿಮ್ಮಿಗೆ (ಕೃಷ್ಣರಾಜ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರಂ ವರ್ಷಗಳಲ್ಲಿ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಎಷ್ಟು ಮಂದಿ ನಿರುದ್ಯೋಗಿಗಳಿಗೆ ಇದಂವರೆಗೂ ಸಾಲವನ್ನು ಒದಗಿಸಲಾಗಿದೆ ?

ಆ) ಆ ಪೈಕಿ ಎಷ್ಟು ಮಂದಿ ನಿರುದ್ಯೋಗಿ ಮಹಿಳೆಯರಿಗೆ ಸಾಲವನ್ನು ಕೊಡಲಾಗಿದೆ ?

ಇ) ನಿರುದ್ಯೋಗಿಗಳಿಗೆ ಸಾಲ ಕೊಡಲು ಸರ್ಕಾರ ಅನುಸರಿಸುತ್ತಿರುವ ನೀತಿ ನಿಯಮಂಗಳೇನು?

ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಭಾರತ ಸರ್ಕಾರದ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಯೋಜನೆಯು ೧೯೮೩-೮೪ರಿಂದ ಜಾರಿಯಲ್ಲಿದೆ. ರಾಜ್ಯದಲ್ಲಿ ಅದರ ಪ್ರಗತಿ ಕೆಳಕಂಡಂತಿವೆ.

ವರ್ಷ	ಫಲಾನುಭವಿಗಳ ಸಂಖ್ಯೆ	ಪಡೆದ ಸಾಲ (ಲಕ್ಷ ರೂ. ಗಳಲ್ಲಿ)
೧೯೮೩-೮೪	೧೨೩೦೭	೧೯೬೦.೦೦
೧೯೮೪-೮೫	೧೨೮೧೦	೨೩೭೯.೦೦
೧೯೮೫-೮೬	೧೨೮೩೭	೨೫೦೬.೫೦
೧೯೮೬-೮೭	೧೨೧೦೦	೨೩೯೫.೦೦
ಒಟ್ಟು	೫೦೦೫೪	೯೨೪೦.೫೦

೯೨.೪೪ ಕೋಟಿ.

ಆ) ಮಹಿಳೆಯರಿಗೆ ಯಾವುದೇ ವಿಶೇಷ ಸಾಲ ನೀಡುವಲ್ಲಿ ಅವರಿಗೆ ಆದ್ಯತೆ ನೀಡಲಾಗಿದೆ, ಎಷ್ಟು ಮಂದಿ ಮಹಿಳೆಯರಿಗೆ ಸಾಲವನ್ನು ಕೊಡಲಾಗಿದೆ ಎಂಬ ವಿವರವನ್ನು ಎಲ್ಲಾ ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ತರಿಸಲಾಗಿದೆ. ಅವರಿಂದ ಮಾಹಿತಿ ಬಂದ ನಂತರ ತಿಳಿಸಲಾಗುವುದು.

ಇ) ೧) ಅಭ್ಯರ್ಥಿಯು ಕನಿಷ್ಟ ಎಸ್. ಎಸ್. ಎಲ್. ಸಿ. ಯಲ್ಲಿ ಉತ್ತೀರ್ಣನಾಗಿರಬೇಕು.

೨) ವಯಸ್ಸು ೧೮ ವರ್ಷಕ್ಕೆ ಮೇಲಿರಬೇಕು. ಹಾಗೂ ೩೫ ವರ್ಷದ ಒಳಗಿರಬೇಕು.

೩) ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ. ೧೮,೦೦೦ದ ಒಳಗಿರಬೇಕು.

೪) ಅಭ್ಯರ್ಥಿಯು ೧೯೮೧ ರ ಜನಗಣತಿಯ ಪ್ರಕಾರ ೧೦ ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪ್ರದೇಶದವನಾಗಿರಬೇಕು.

ಶ್ರೀ ವೇದಾಂತ ಹೆಮ್ಮಿಗೆ.—ಅಧ್ಯಕ್ಷರೇ, ಇವರ ಉತ್ತರದ ಪ್ರಕಾರ ೧೯೮೩-೮೪ರಲ್ಲಿ ೧೨,೩೦೭ ಫಲಾನುಭವಿಗಳಿದ್ದರೆ ೧೯೮೬-೮೭ರಲ್ಲಿ ೧೨,೧೦೦ ಜನ ಫಲಾನುಭವಿಗಳಿದ್ದಾರೆ, ೧೯೮೩-೮೪ರಿಂದ ೧೯೮೬-೮೭ಕ್ಕೆ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗುವುದಕ್ಕೆ ಮುಖ್ಯ ಕಾರಣಗಳೇನು ? ಎರಡನೆಯದಾಗಿ, ಸಾಲ ಮಂಜೂರಾಗಿ ಬ್ಯಾಂಕ್‌ಗಳಿಗೆ ಶಿಫಾರಸ್ಸು ಆಗಿದ್ದರೂ ಕೂಡಾ ಬ್ಯಾಂಕಿನಿಂದ ಸಾಲ ಸಿಗುತ್ತಿಲ್ಲ. ಸರಿಯಾದ ಕಾಲದಲ್ಲಿ ಇಲಾಖೆಯವರು ಸಾಲಕ್ಕೆ ಶಿಫಾರಸ್ಸೂ ಮಾಡುತ್ತಿಲ್ಲ, ಇದಕ್ಕೆಲ್ಲಾ ಕಾರಣವೇನು ?

ಶ್ರೀ ಬಿ. ಎ. ಜೀವಿಜಯ.—ಇದು ಕೇಂದ್ರ ಸರ್ಕಾರದ ಯೋಜನೆಯಾದ್ದರಿಂದ ಅವರು ಎಷ್ಟು ಟಾರ್ಗೆಟ್ ಕೊಡುತ್ತಾರೋ ಅಷ್ಟು ಹಣವನ್ನು ಮಂಜೂರು ಮಾಡಿದ್ದೇವೆ. ಜಿಲ್ಲಾ ಕೇಂದ್ರದಲ್ಲಿ ಸರಿಯಾದ ಆಯ್ಕೆ ಆಗಿಲ್ಲವೆಂದು ಹೇಳಿದ್ದೀರಿ. ನಮ್ಮಲ್ಲಿ ಟಾಸ್ಕ್ ಫೋರ್ಸ್ ಇದೆ. ಇದರಲ್ಲಿ ಲೀಡ್ ಬ್ಯಾಂಕ್‌ನ ಮೇನೇಜರ್, ಸಣ್ಣಕೈಗಾರಿಕಾ ಸೇವಾ ಸಂಸ್ಥೆಯವರು ಹಾಗೂ ಜಿಲ್ಲಾ ಎಂಪ್ಲಾಯ್‌ಮೆಂಟ್ ಆಫೀಸರ್ ಅವರು ಇರುತ್ತಾರೆ. ಫಲಾನುಭವಿಗಳನ್ನು ಸೆಲೆಕ್ಟ್ ಮಾಡಲು ನಿರ್ದಿಷ್ಟ ಕ್ರಮ ಇದೆ. ಆ ಪ್ರಕಾರ ಆಯ್ಕೆ ಮಾಡಲಾಗುತ್ತದೆ. ಯಾವ ವರ್ಷದಲ್ಲೂ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗಿಲ್ಲ. ಟಾರ್ಗೆಟ್ ಪ್ರಕಾರ ನಾವು ಹಣ ಕೊಟ್ಟಿದ್ದೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಎರಡನೆಯ ಉತ್ತರದಲ್ಲಿ ಮಹಿಳೆಯರಿಗಾಗಿ ಯಾವುದೇ ವಿಶೇಷ ಸಾಲ ಇಲ್ಲವೆಂದು ತಿಳಿಸಿದ್ದೀರಿ. ಸಹಕಾರಿ ರಂಗದಲ್ಲಿ ಮಹಿಳೆಯರು ಮುಂದೆ ಬರಲು ಈ ಸರ್ಕಾರ ಶೇಕಡ ೨೦-೨೫ ಸ್ಥಾನಗಳನ್ನು ವಿಶೇಷ ಸಾಲ ಇಟ್ಟಿದೆ. ಮಹಿಳೆಯರಿಗೆ ಹೆಚ್ಚು ಆದ್ಯತೆ ಕೊಡಬೇಕಾದ ಸಣ್ಣ ಕೈಗಾರಿಕಾ ರಂಗದಲ್ಲಿ ಇವರಿಗೆ ಆದ್ಯತೆ ಕೊಡುವುದು ಮುಖ್ಯ. ದಯವಿಟ್ಟು ಈ ಸಣ್ಣ ಕೈಗಾರಿಕೆಗಳನ್ನು ಮನೆಯಲ್ಲೇ ಸ್ಥಾಪನೆ ಮಾಡುವುದಕ್ಕೆ ವಿಶೇಷ ಸಾಲ ತರುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ ?

ಶ್ರೀ ಬಿ. ಎ. ಜೀವಿಜಯ.—ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ನಾವು ನಡೆಯುತ್ತೇವೆ. ಮಾನ್ಯ ಸದಸ್ಯರ ಸೂಚನೆ ಬಗ್ಗೆ ನಾವು ಕೇಂದ್ರಕ್ಕೆ ಪತ್ರ ಬರೆಯುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಸಾಲ ಸೌಕರ್ಯ ದೊರಕುವ ಬಗ್ಗೆ ಸಮಿತಿ ಇದ್ದು ಅಲ್ಲಿರುವ ಅಧಿಕಾರ ವರ್ಗದವರ ಬಗ್ಗೆ ಹೇಳಿದ್ದೀರಿ. ಆದರೆ ಈ ಸಮಿತಿಯಲ್ಲಿ ಸಾರ್ವಜನಿಕ ಚುನಾಯಿತ ಪ್ರತಿನಿಧಿಯ ಪ್ರಾತಿನಿಧ್ಯ ಇದರಲ್ಲಿ ಇಲ್ಲ. ಸಾಲ ಕೊಡಲು ಸಂದರ್ಶನಕ್ಕೆ ಈ ಜನರನ್ನು ಕರೆದಾಗ ಅಲ್ಲಿ ಸಾರ್ವಜನಿಕ ಪ್ರತಿನಿಧಿ ಇರಬೇಕಾಗುತ್ತದೆ. ಆದ್ದರಿಂದ ಆಯಾ ಕ್ಷೇತ್ರದ ಶಾಸಕರಿಗೆ ಆ ಸಮಿತಿಗಳಲ್ಲಿ ಅವಕಾಶ ಮಾಡಿಕೊಡುತ್ತೀರಾ ? ಅಥವಾ ಮಾನ್ಯ ಪೂಜಾರಿಯವರ ಪೂಜೆ ಮಾಡಿದರೆ ಎಲ್ಲಿ ಬೇಕಾದರೂ ಸಾಲ ಸಿಗುತ್ತದೆ. ಈ ಸಾಲ ಸಿಗಬೇಕಾದರೆ ಯಾರನ್ನು ಯಾವ ರೀತಿಯಲ್ಲಿ ಪೂಜೆ ಮಾಡಬೇಕು ?

SRI K. H. PATIL.—I strongly object to this type of question. This is not the way to take the name of others who are not members of this House. I hope that youwill order for striking off that sentence.

ಶ್ರೀ ಜೆ. ಎಸ್. ಶಿವನಂಜಪ್ಪ.—ಮಾನ್ಯ ಪೂಜಾರಿ ಅವರ ಸಾಲದ ಯಾವ ಸ್ಕೀಮೂ ಈಗ ಇಲ್ಲ.

ಶ್ರೀ ಬಿ. ಎ. ಜೀವಿಜಯ.—ಆಯಾ ಸಮಿತಿಗಳಿಗೆ ಸ್ಥಳೀಯ ಶಾಸಕರನ್ನು ಹಾಕಬೇಕೆಂದು ಸದಸ್ಯರು ಹೇಳುತ್ತಿದ್ದಾರೆ. ಇದು ಕೇಂದ್ರದ ಯೋಜನೆಯಾಗಿದ್ದು ಅಲ್ಲಿಯ ನಿರ್ದೇಶನದಂತೆ ರಾಜ್ಯ ಸರ್ಕಾರ ನಡೆಯಬೇಕಾಗುತ್ತದೆ. ಮಾನ್ಯ ಸದಸ್ಯರ ಸಲಹೆಯನ್ನು ಕೇಂದ್ರ ಸರ್ಕಾರ ಒಪ್ಪಿ ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನನ್ನ ಭಾವನೆ.

ರೇಷ್ಮೆಗೂಡಿನ ಮಾರ್ಕೆಟ್‌ಗಳಲ್ಲಿ ಶೈತ್ಯಾಗಾರದ ಸ್ಥಾಪನೆ ಬಗ್ಗೆ.

೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಶೈತ್ಯಾಗಾರಗಳನ್ನು ನಿರ್ಮಿಸಲು ಸರ್ಕಾರ ಉದ್ದೇಶಿಸಿರುವುದು ನಿಜವೆ ?

ಆ) ಹಾಗಿದ್ದಲ್ಲಿ, ಈವರೆವಿಗೆ ಇದಕ್ಕೆ ತಗುಲಿರುವ ಖರ್ಚು ಎಷ್ಟು ಎಂತು, ಈ ಯೋಜನೆಗೆ ಯಾರು ಹಣ ಒದಗಿಸುತ್ತಿದ್ದಾರೆ.

ಇ) ಶೈತ್ಯಾಗಾರಗಳ ನಿರ್ಮಾಣ ಕಾರ್ಯವನ್ನು ವಿದೇಶದ ಸಂಸ್ಥೆಗೆ ನೀಡಿರುವುದು ನಿಜವೇ ?

ಈ) ಹಾಗಿದ್ದಲ್ಲಿ ವಿದೇಶದ ಸಂಸ್ಥೆಗೆ ಕೊಟ್ಟಿರುವ ಟೆಂಡರಿನ ಮೌಲ್ಯ ಎಷ್ಟು ಹಾಗೂ ವಿದೇಶದ ಸಂಸ್ಥೆಯ ಹೆಸರು.

ಶ್ರೀ ಕೆ. ಎಂ. ವಂಜಿಯಂಪ್ಪ (ರೇಷ್ಮೆ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ನಿಜ.

ಈ) ಟೆಂಡರಿನ ಒಟ್ಟು ಮೌಲ್ಯ ೧೪೩,೦೩,೭೩೦ ಜಪಾನಿನ ಯೆನ್ನುಗಳು ೧,೩೮೯,೧೯,೩೪೦ ರೂಪಾಯಿಗಳು ಸಂಸ್ಥೆಯ ಹೆಸರು ಮೆಸರ್ಸ್ ಮಾರುಬೆನಿ ಕಾರ್ಪೊರೇಷನ್ ಟೋಕಿಯೋ, ಜಪಾನ್.

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ನಾಲ್ಕನೆಯ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಜಪಾನ್, ಕೊರಿಯಾ ಫರ್ಮ್‌ನವರು ಟೆಂಡರ್ ಹಾಕಿದ್ದಾರೆ, ಇಂಡಿಯನ್ ಫರ್ಮ್ ಬ್ಲೂಸ್ಟಾರ್ ಅವರು ೧೨ ಕೋಟಿ ರೂಪಾಯಿಗಳ ಟೆಂಡರ್ ಹಾಕಿದ್ದಾರೆ. ಅದನ್ನು ರಿಜೆಕ್ಟ್ ಮಾಡಿ, ಅವರೇ ಒಪ್ಪಿಕೊಂಡಹಾಗೆ ಮಾರುಬೆನಿ ಕಾರ್ಪೊರೇಷನ್ ಟೋಕಿಯೋ ಜಪಾನ್ ಫರ್ಮ್‌ನವರಿಗೆ ೧೪ ಕೋಟಿ ೩೦ ಲಕ್ಷ ಚಿಲ್ಲರೆಗೆ ಟೆಂಡರ್ ಕೊಟ್ಟಿದ್ದಾರೆ. ಅದರಿಂದ ನಮ್ಮ ಸರ್ಕಾರಕ್ಕೆ ೪ ಕೋಟಿ ೩೦ ಲಕ್ಷ